ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೨೩, ಮಾರ್ಚ್, ೨೦೨೬( ಚೈತ್ರ ,೦೨, ಶಕವರ್ಷ, ೧೯೪೮)<br>BENGALURU, MONDAY, 23, MARCH, 2026( CHAITHRA , 02, SHAKAVARSHA, 1948) | ನಂ. ೨೨೪<br>No. 224 |
|---|---|---|

**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಒಂಭತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

# ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–09)**

ಕರ್ನಾಟಕ ರಾಜ್ಯದ ಪರವಾಗಿ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಬಳಸುತ್ತಿರುವ ನಿಹಿತಗೊಳಿಸಿದ ಭೂಮಿಯ ರಕ್ಷಣೆ ಮತ್ತು ಸಕ್ರಮಾತಿಯನ್ನು ಉಪಬಂಧಿಸುವುದಕ್ಕಾಗಿ ಒಂದು ವಿಧೇಯಕ .

ಕರ್ನಾಟಕ ರಾಜ್ಯದ ಪರವಾಗಿ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಬಳಸುತ್ತಿರುವ ನಿಹಿತಗೊಳಿಸಿದ ಭೂಮಿಯ ರಕ್ಷಣೆ ಮತ್ತು ಸಕ್ರಮಾತಿಯನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

(ಎ) "ಪ್ರಾಧಿಕಾರ" ಎಂದರೆ, ಶಾಲಾ ಶಿಕ್ಷಣ ಇಲಾಖೆ ಅಥವಾ ಶಾಲಾ ಶಿಕ್ಷಣ ಇಲಾಖೆ (ಪದವಿ-ಪೂರ್ವ) ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಿದ ಯಾವುದೇ ನಿಕಾಯ;

(ಬಿ) "ಸರ್ಕಾರಿ ಶೈಕ್ಷಣಿಕ ಸಂಸ್ಥೆ" ಎಂಬುದು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಪ್ರಕರಣ 2(3)ರಡಿ ಪರಿಭಾಷಿಸಲಾದಂತೆ ಅನುಮೋದಿತ ಶಾಲೆಗಳು ಹಾಗೂ ಕರ್ನಾಟಕ ಶಾಲಾ ಶಿಕ್ಷಣ (ಪದವಿ ಪೂರ್ವ) (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ) ನಿಯಮಗಳು, 2024ರ 2ನೇ ನಿಯಮದ ಉಪ-ನಿಯಮ (5)ರಡಿ ಪರಿಭಾಷಿಸಲಾದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಒಳಗೊಳ್ಳುವುದು; ಮತ್ತು

(ಸಿ) “ನಿಯಮಿಸಲಾದುದು” ಎಂದರೆ ಈ ಅಧಿನಿಯಮದಡಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

**3. ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಬಳಸುತ್ತಿರುವ ಭೂಮಿಯನ್ನು ನಿಹಿತಗೊಳಿಸುವುದು.-**

(1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರಿ ಶೈಕ್ಷಣಿಕ ಸಂಸ್ಥೆಯು ಕನಿಷ್ಠ ಹನ್ನೆರಡು ವರ್ಷಗಳಿಂದ ಯಾವುದೇ ಸ್ಥಿರಾಸ್ತಿಯ ಮೇಲೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಆ ಭೂಮಿಯು ಎಲ್ಲಾ ಋಣಭಾರಗಳು, ಕ್ಲೇಮುಗಳು ಅಥವಾ ಉತ್ತರಾಧಿಕಾರದ ಹಿತಾಸಕ್ತಿಗಳಿಂದ ಮುಕ್ತಗೊಂಡು, ರಾಜ್ಯ ಸರ್ಕಾರಿ ಅಥವಾ ಯುಕ್ತ ಪ್ರಾಧಿಕಾರದ ಪರವಾಗಿ ನಿಹಿತವಾಗಿರುವುದೆಂದು ಭಾವಿಸತಕ್ಕದ್ದು.

(2) ಅಂಥ ನಿಹಿತವಾಗಿರುವುದಕ್ಕೆ,-

(ಎ) ನೋಂದಾಯಿತ ವರ್ಗಾವಣೆ ದಸ್ತಾವೇಜಿನ ಅಲಭ್ಯತೆ;

(ಬಿ) ಉಯಿಲು ಮಾಡಿರುವ ಅಥವಾ ಉಯಿಲು ಮಾಡದಿರುವ ದಾನಿಯ ಮರಣ;

(ಸಿ) ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ ಕೇಂದ್ರ ಅಧಿನಿಯಮ 04) ಅಥವಾ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 (1925ರ ಕೇಂದ್ರ ಅಧಿನಿಯಮ 39)ರ ಉಪಬಂಧಗಳ ಅನನುಪಾಲನೆಯು,

- ಪರಿಣಾಮ ಬೀರತಕ್ಕದ್ದಲ್ಲ.

**4. ಕಾನೂನಾತ್ಮಕ ಕ್ಲೇಮುಗಳು ಮತ್ತು ವ್ಯವಹರಣೆಗಳ ಮೇಲೆ ಪ್ರತಿಷೇಧ.-** (1) ಹನ್ನೆರಡು ವರ್ಷಗಳಿಗಿಂತ ಹೆಚ್ಚಿನ ಅವಧಿಯವರೆಗೆ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಸ್ವಾಧೀನಾನುಭವವು ಮುಂದುವರೆದಾಗ, ಆ ನಿಹಿತವಾದ ಭೂಮಿಯಲ್ಲಿ ಯಾರೇ ವ್ಯಕ್ತಿಯು ಕ್ಲೇಮು ಮಾಡಿದ ಯಾವುದೇ ಹಕ್ಕು, ಹಕ್ಕುಸ್ವಾಮ್ಯ ಅಥವಾ ಹಿತಾಸಕ್ತಿಗೆ ಸಂಬಂಧಿಸಿದಂತೆ ರಾಜ್ಯ ಅಥವಾ ಯಾವುದೇ ಪ್ರಾಧಿಕಾರದ ವಿರುದ್ಧ ದಾವೆ, ಅರ್ಜಿ, ಅಪೀಲು ಅಥವಾ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದಲ್ಲಿ ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಅಂಥ ಭೂಮಿಗಳ ಹಕ್ಕುಸ್ವಾಮ್ಯ ಅಥವಾ ಅನುಭೋಗಕ್ಕೆ ಸಂಬಂಧಿಸಿದ ಯಾವುದೇ ದಾವೆಯು ಬಾಕಿಯಿದ್ದರೆ, ಆರ್ಜನೆಯ ವ್ಯವ್ಯಹರಣೆಯಡಿ ಈಗಾಗಲೇ ಪರಿಹಾರವನ್ನು ನೀಡಿದ ಹೊರತು ತಕ್ಷಣವೇ ಮುಕ್ತಾಯಗೊಳ್ಳತಕ್ಕದ್ದು.

(3) ಉಪಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯು,-

(ಎ) ಪ್ರಶ್ನಿತ ಭೂಮಿಯ ನೋಂದಾಯಿತ ಹಕ್ಕುಸ್ವಾಮ್ಯದ ದಸ್ತಾವೇಜು ಹೊಂದಿರುವುದು, ಮತ್ತು

(ಬಿ) ಭೂಮಿಯನ್ನು ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಬಳಕೆಗೆ ಯಾವುದೇ ಕಾರಣಕ್ಕೂ ಸ್ವ-ಇಚ್ಛೆಯಿಂದ ನೀಡಿರುವುದಿಲ್ಲವೆಂದು ದಸ್ತಾವೇಜಿನ ಸಾಕ್ಷ್ಯದ ಮೂಲಕ ಸಾಬೀತುಪಡಿಸಿ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ 30 ದಿನಗಳೊಳಗಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಕ್ಲೇಮನ್ನು ಸಲ್ಲಿಸಬಹುದು.

(4) ಕ್ಲೇಮನ್ನು ಸ್ವೀಕರಿಸಿದಲ್ಲಿ, ರಾಜ್ಯ ಸರ್ಕಾರವು ನಿಯಮಿಸಲಾದಂತೆ ಪರ್ಯಾಯ ಭೂಮಿ ಅಥವಾ ನಿಹಿತಗೊಂಡಿರುವುದರಿಂದ ಭಾಗಶಃ ವಿನಾಯಿತಿಯನ್ನು ಒಳಗೊಂಡಂತೆ ಸೂಕ್ತ ಪರಿಹಾರಾತ್ಮಕ ಕ್ರಮವನ್ನು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಶಿಫಾರಸ್ಸು ಮಾಡಬಹುದು.

**5. ಸಾರ್ವಜನಿಕ ಉದ್ದೇಶದ ಬಳಕೆಯ ಪೂರ್ವಭಾವನೆ.-** (1) ಸಮುದಾಯದ ತಿಳುವಳಿಕೆಯಲ್ಲಿ ಮತ್ತು ಹನ್ನೆರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಯಾವುದೇ ಆಕ್ಷೇಪಣೆಯಿಲ್ಲದೆ ಭೂಮಿಯನ್ನು ನಿರಂತರವಾಗಿ ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಿದಲ್ಲಿ, ಅಂಥ ಬಳಕೆಯು ಸಿಂಧುವಾದ ಮತ್ತು ಹಿಂತೆಗೆದುಕೊಳ್ಳಲಾಗದ ಸಾರ್ವಜನಿಕ ಸಮರ್ಪಣೆ ಎಂಬುದಾಗಿ ಪೂರ್ವಭಾವಿತವಾಗತಕ್ಕದ್ದು.

(2) ದಸ್ತಾವೇಜಿನ ಪುರಾವೆಯ ಅಲಭ್ಯತೆಯು ಸಾರ್ವಜನಿಕ ಉದ್ದೇಶದ ಬಳಕೆಯ ಪೂರ್ವಭಾವನೆಯನ್ನು ಅಲ್ಲಗಳೆಯತಕ್ಕದ್ದಲ್ಲ.

**6. ಸ್ವಯಂಕೃತ ನಿರ್ಬಂಧ ಮತ್ತು ಅನುಚಿತ ವಿಳಂಬ.-** ವ್ಯಕ್ತಿಯು ಅಥವಾ ಆತನ ಪೂರ್ವದ ಹಕ್ಕುದಾರರು, ಸರ್ಕಾರಿ ಶಿಕ್ಷಣ ಸಂಸ್ಥೆಯ ಉದ್ದೇಶಗಳಿಗಾಗಿ ಭೂಮಿಯ ಬಳಕೆಯನ್ನು ತಿಳಿದಿದ್ದೂ ಸಮ್ಮತಿಸಿದ್ದರೆ ಮತ್ತು ಯುಕ್ತ ಸಮಯದೊಳಗೆ ಆಕ್ಷೇಪಿಸಲು ವಿಫಲರಾಗಿದ್ದರೆ, ಆ ವ್ಯಕ್ತಿಯು ಸರ್ಕಾರಿ ಶಿಕ್ಷಣ ಸಂಸ್ಥೆಯ ಭೂಮಿಯ ಮೇಲೆ ಹಕ್ಕನ್ನು ಪ್ರತಿಪಾದಿಸಲು ಅರ್ಹನಾಗಿರತಕ್ಕದ್ದಲ್ಲ.

**7. ಭೂಮಿಯ ನೋಂದಣಿ ಮತ್ತು ನಿಹಿತ ಪ್ರಮಾಣ ಪತ್ರ.-** (1) ರಾಜ್ಯ ಸರ್ಕಾರವು, 8ನೇ ಪ್ರಕರಣದಡಿ ಗೊತ್ತುಪಡಿಸಲಾದ ಎಸ್ಟೇಟ್ ಅಧಿಕಾರಿಯ ಮೂಲಕ, ಈ ಅಧಿನಿಯಮದಡಿ ನಿಹಿತವಾಗಿರುವುದಾಗಿ ಭಾವಿಸಲಾದ ಭೂಮಿಗಳ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ನಿಹಿತ ಪ್ರಮಾಣಪತ್ರವನ್ನು,-

(ಎ) ಸಾರ್ವಜನಿಕ ನೋಟೀಸನ್ನು ಪಂಚಾಯತಿ ಮತ್ತು ತಾಲ್ಲೂಕು ಕಚೇರಿಗಳಲ್ಲಿ ವ್ಯಾಪಕ ಪ್ರಸಾರದಲ್ಲಿರುವ ಸ್ಥಳೀಯ ಭಾಷೆಯ ಕನಿಷ್ಟ ಎರಡು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದ ಹೊರತು;

(ಬಿ) ಅರವತ್ತು ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಆಹ್ವಾನಿಸಿದ ಮತ್ತು ತಿಳಿಸಿದ ಹೊರತು;

(ಸಿ) ಪ್ರಕರಣ 9ರಡಿ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಆಕ್ಷೇಪಣಾದಾರರಿಗಾಗಿ ಕ್ಷಿಪ್ರಕ್ರಮದ (summary) ವಿಚಾರಣೆಯನ್ನು ನಡೆಸಿದ ಹೊರತು;

- ಹೊರಡಿಸತಕ್ಕದ್ದಲ್ಲ.

(3) ಯುಕ್ತ ಪ್ರಾಧಿಕಾರವು ಪ್ರತಿಯೊಂದು ಸ್ವತ್ತಿಗೆ, ಎಲ್ಲಾ ಉದ್ದೇಶಗಳಿಗಾಗಿ ಹಕ್ಕಿನ ನಿರ್ಣಾಯಕ ಸಾಕ್ಷ್ಯದಂತೆ ಜಾರಿಗೊಳಿಸತಕ್ಕ, ನಿಹಿತ ಪ್ರಮಾಣಪತ್ರವನ್ನು ಹೊರಡಿಸತಕ್ಕದ್ದು.

**8. ಎಸ್ಟೇಟ್ ಅಧಿಕಾರಿಯ ನೇಮಕಾತಿ ಮತ್ತು ಅಧಿಕಾರಗಳು.-** (1) ಕ್ಷೇತ್ರ ಶಿಕ್ಷಣಾಧಿಕಾರಿ (BEO) ಮತ್ತು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ (DDPU) ಇವರನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವರ ಅಧಿಕಾರವ್ಯಾಪ್ತಿಯೊಳಗಿನ ಎಲ್ಲಾ ಸರ್ಕಾರಿ ಶಿಕ್ಷಣ ಸಂಸ್ಥೆಯ ಭೂಮಿಗಳ ಸಂಬಂಧದಲ್ಲಿ ಎಸ್ಟೇಟ್ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

(2) ಎಸ್ಟೇಟ್ ಅಧಿಕಾರಿಯು,-

(ಎ) ಎಲ್ಲಾ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ವತ್ತುಗಳ ನಿಖರ ಮತ್ತು ಇತ್ತೀಚಿನ ಭೂ ದಾಖಲೆಗಳನ್ನು ನಿರ್ವಹಿಸಲು;

(ಬಿ) ಅಂಥ ಭೂಮಿಗಳ ಒತ್ತುವರಿ, ದುರುಪಯೋಗ ಅಥವಾ ಪರಭಾರೆಯ ಮೇಲ್ವಿಚಾರಣೆಯನ್ನು ಮಾಡಲು;

(ಸಿ) ಅನುಸೂಚಿತ ಬುಡಕಟ್ಟುಗಳ ಮತ್ತು ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 2)ನಂತಹ ಧಾರ್ಮಿಕ ಸಂಸ್ಥೆ

ಭೂಮಿಗಳನ್ನು ವಿಶೇಷ ಕಾನೂನುಗಳ ಮೂಲಕ ನಿಯಂತ್ರಿಸುವುದಕ್ಕಾಗಿ ಜವಾಬ್ದಾರಿ ಹೊಂದಿರುವ ಇಲಾಖೆಗಳಾದ ಅರಣ್ಯ ಇಲಾಖೆ, ವಕ್ಫ್ ಮಂಡಳಿಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತಗೊಳಿಸದೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ ಮತ್ತು ಇತರ ಸಂಬಂಧಿತ ಪ್ರಾಧಿಕಾರಗಳೊಂದಿಗೆ ಸಮನ್ವಯ ಅಥವಾ ರಕ್ಷಣೆ ಅಥವಾ ಸರ್ಕಾರಿ ಶೈಕ್ಷಣಿಕ ಸಂಸ್ಥೆ ಭೂಮಿಗಳನ್ನು ಮರಳಿ ಪಡೆಯಲು; ಮತ್ತು

(ಡಿ) ನಿಹಿತ ಪ್ರಮಾಣ ಪತ್ರಗಳನ್ನು ಸಿದ್ದಪಡಿಸಲು ಮತ್ತು ಪರಿಶೀಲಿಸುವುದಕ್ಕಾಗಿ ಪ್ರಾಧಿಕಾರಕ್ಕೆ ನೆರವು ನೀಡಲು,

- ಜವಾಬ್ದಾರನಾಗಿರತಕ್ಕದು.

(3) ಎಸ್ಟೇಟ್ ಅಧಿಕಾರಿಯು, ಲಿಖಿತ ಸಂವಹನದ ಮೂಲಕ ತಹಶೀಲ್ದಾರರಿಗೆ,-

(ಎ) ಭೂಮಿಯ ಸರ್ವೆಗಳನ್ನು ಮತ್ತು ಗಡಿ ಗುರುತಿಸುವಿಕೆಯನ್ನು ನಡೆಸುವಂತೆ;

(ಬಿ) ಶಾಸನಬದ್ದ ನಿಹಿತವನ್ನು ತೋರಿಸುವ ಕಂದಾಯ ದಾಖಲೆಗಳನ್ನು ಇಂದೀಕರಿಸುವಂತೆ; ಮತ್ತು

(ಸಿ) ಸಂಬಂಧಪಟ್ಟ ಭೂ ಕಾನೂನುಗಳಡಿ ಹೊರಹಾಕುವ ಅಥವಾ ರಕ್ಷಿಸುವ ಕ್ರಮಗಳನ್ನು ಕೈಗೊಳ್ಳ ,

-ಕೋರಬಹುದು.

(4) ಎಸ್ಟೇಟ್ ಅಧಿಕಾರಿಯು, ಅನುಸೂಚಿತ ಬುಡಕಟ್ಟುಗಳ ಮತ್ತು ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 2)ನಂತಹ ಅಥವಾ ಧಾರ್ಮಿಕ ಸಂಸ್ಥೆ ಭೂಮಿಗಳನ್ನು ವಿಶೇಷ ಕಾನೂನುಗಳ ಮೂಲಕ ನಿಯಂತ್ರಿಸುವುದಕ್ಕಾಗಿ ಜವಾಬ್ದಾರಿ ಹೊಂದಿರುವ ಇಲಾಖೆಗಳಾದ ಅರಣ್ಯ ಇಲಾಖೆ, ವಕ್ಫ್ ಮಂಡಳಿಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತಗೊಳಿಸದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ಇತರ ಸಂಬಂಧಿತ ಪ್ರಾಧಿಕಾರಗಳ ಮೂಲಕ ನಿಯಮಿಸಬಹುದಾದಂತೆ ತಪಾಸಣೆಯನ್ನು ನಡೆಸುವುದಕ್ಕಾಗಿ ಸಂಬಂಧಪಟ್ಟ ದಾಖಲೆಗಳು ಲಭ್ಯವಾಗುವಂತೆ ಮಾಡತಕ್ಕದ್ದು.

**9. ಕುಂದುಕೊರತೆ ನಿವಾರಣಾ ಪ್ರಾಧಿಕಾರ.-** (1) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರಡಿ ರಚಿಸಲಾದ ಕಂದಾಯ ನ್ಯಾಯಾಲಯವು ಈ ಅಧಿನಿಯಮದ ಉದ್ದೇಶಕ್ಕಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರವಾಗಿರತಕ್ಕದ್ದು.

(2) ನಿಹಿತ ಪ್ರಮಾಣ ಪತ್ರ ಅಥವಾ ಅದರ ನಿರಾಕರಣೆಯಿಂದ ಭಾದಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ 30 ದಿನಗಳ ಅವಧಿಯೊಳಗಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಮನವಿಯನ್ನು ಸಲ್ಲಿಸಬಹುದು.

(3) ಕುಂದುಕೊರತೆ ನಿವಾರಣಾ ಪ್ರಾಧಿಕಾರವು 60 ದಿನಗಳ ಅವಧಿಯೊಳಗಾಗಿ ವಿಷಯವನ್ನು ಸಮರ್ಥನೆಯುಕ್ತ ಆದೇಶದೊಂದಿಗೆ ವಿಲೇವಾರಿ ಮಾಡತಕ್ಕದ್ದು.

**10. ನ್ಯಾಯಾಧಿಕರಣಕ್ಕೆ ಅಪೀಲು.-** (1) ಕುಂದುಕೊರತೆ ನಿವಾರಣಾ ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಕರ್ನಾಟಕ ಅಪೀಲು ನ್ಯಾಯಾಧಿಕರಣ

ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 10)ರಡಿ ರಚಿಸಲಾದ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.

(2) ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಅವಧಿಯೊಳಗಾಗಿ ಅಪೀಲನ್ನು ದಾಖಲಿಸತಕ್ಕದ್ದು.

**11. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲಿನ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಭಾದಕವಾಗದಂಥ ನಿಯಮಗಳನ್ನು ಉಪಬಂಧಿಸಬಹುದು,-

(ಎ) ಸರ್ಕಾರಿ ಶಿಕ್ಷಣ ಸಂಸ್ಥೆಯು ಬಳಸುತ್ತಿರುವ ಭೂಮಿಗಳನ್ನು ಗುರುತಿಸಲು ಮತ್ತು ಸರ್ವೇ ನಡೆಸುವ ಕಾರ್ಯವಿಧಾನ;

(ಬಿ) ಭೂಮಿಯ ರಿಜಿಸ್ಟರುಗಳ ನಿರ್ವಹಣೆ;

(ಸಿ) ಈ ಅಧಿನಿಯಮದಡಿ ರಚಿಸಲಾದ ನಿಯಮಗಳಲ್ಲಿ ನಿಯಮಿಸಲಾದಂತೆ ನಿಹಿತ ಪ್ರಮಾಣಪತ್ರಗಳು ಮತ್ತು ಸಾರ್ವಜನಿಕ ನೋಟೀಸಿನ ನಮೂನೆಗಳು; ಮತ್ತು

(ಡಿ)ಈ ಅಧಿನಿಯಮವು ಉಪಬಂಧಗೊಳಿಸದಿರುವ ಅಥವಾ ಅಸಮರ್ಪಕ ಉಪಬಂಧನ್ನು ಮಾಡಿರುವ ಮತ್ತು ರಾಜ್ಯ ಸರ್ಕಾರವು ಈ ಅಧಿನಿಯಮದ ಯುಕ್ತ ಅನುಷ್ಠಾನಕ್ಕಾಗಿ ಅಗತ್ಯವೆಂದು ಅಭಿಪ್ರಾಯ ನೀಡಿರುವ ಉಪಬಂಧಗಳ ಸಂಬಂಧದಲ್ಲಿ ಈ ಅಧಿನಿಯಮವು ನಿಯಮಿಸಬೇಕಾಗಿರುವಂತೆ ಸ್ಪಷ್ಟವಾಗಿ ಅಗತ್ಯವಿರುವ ಅಥವಾ ಅನುಮತಿಸುವ ಎಲ್ಲಾ ವಿಷಯಗಳು.

(3)ಈ ಅಧಿನಿಯಮದಡಿ ರಚಿಸಿರುವ ಯಾವುದೇ ನಿಯಮವು ಪೂರ್ವಾನ್ವಯವಾಗಿ ಜಾರಿಯಾಗತಕ್ಕದ್ದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮಗಳನ್ನು ರಚಿಸುವುದಕ್ಕಾಗಿ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಬೇಕಾದ ಹೇಳಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಹಾಗೂ ಉಪ-ಪ್ರಕರಣ (4)ರಡಿ ಮಾಡಲಾದ ಯಾವುದೇ ಮಾರ್ಪಾಡಿಗೆ ಒಳಪಟ್ಟು, ಈ ಅಧಿನಿಯಮದಡಿ ರಚಿಸಲಾದ ಪ್ರತಿಯೊಂದು ನಿಯಮವು ಈ ಅಧಿನಿಯಮವನ್ನು ಅಧಿನಿಯಮಿತಿಗೊಳಿಸಿದ ರೀತಿಯಲ್ಲೇ ಜಾರಿಗೊಳಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮದತರುವಾಯ, ಆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**12. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದಡಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರ ಅಥವಾ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**13. ಅಧ್ಯಾರೋಹಿ ಪರಿಣಾಮ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಸಂಗತವಾಗಿರುವುದು ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮವನ್ನು ಹೊಂದಿರತಕ್ಕದ್ದು.

**14.ತೊಂದರೆಗಳ ನಿವಾರಣೆಗೆ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಅಥವಾ ಆದೇಶದ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1. ಕರ್ನಾಟಕದ ಹಲವು ಭಾಗಗಲ್ಲಿ, ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಹಲವು ಬಾರಿ ಔಪಚಾರಿಕ ದಸ್ತಾವೇಜು ಅಥವಾ ನೋಂದಾಯಿತ ವರ್ಗಾವಣೆಯಿಲ್ಲದೆ ವ್ಯಕ್ತಿಗಳು, ಕುಟುಂಬಗಳು ಅಥವಾ ಸಮುದಾಯ ಸಂಸ್ಥೆಗಳು ದಾನಮಾಡಿದ ಭೂಮಿಗಳ ಮೇಲೆ ಸ್ಥಾಪಿಸಲಾಗಿವೆ ಮತ್ತು ಕಾರ್ಯನಿರ್ವಹಿಸುತ್ತಿವೆ. ಸದ್ಭಾವನೆಯಿಂದ ಮಾಡಲಾದ ಈ ದಾನಗಳು, ಹಲವು ಪೀಳಿಗೆಗಳ ಮಕ್ಕಳಿಗೆ ಶಿಕ್ಷಣಸೇವೆ ಸಲ್ಲಿಸಿದ್ದು, ಅತ್ಯವಶ್ಯಕ ಶೈಕ್ಷಣಿಕ ಮೂಲಸೌಕರ್ಯದೊಂದಿಗೆ ರಾಜ್ಯದ ಬೆಳವಣಿಗೆಯನ್ನು ಸಾಧ್ಯವಾಗಿಸಿವೆ. ದಶಕಗಳ ವ್ಯಾಜ್ಯರಹಿತ ಸಾರ್ವಜನಿಕ ಬಳಕೆಯ ಹೊರತಾಗಿ, ದಸ್ತಾವೇಜುಗಳ ತಾಂತ್ರಿಕ ನ್ಯೂನ್ಯತೆಗಳ ಆಧಾರದ ಮೇಲೆ, ಉತ್ತರಾಧಿಕಾರಿಗಳು ಅಥವಾ ಕಾನೂನುಬದ್ಧ ವಾರಸುದಾರರು ಇತ್ತೀಚಿಗೆ ಕ್ಲೇಮುಗಳನ್ನು ಮಾಡುತ್ತಿದ್ದು, ಅವರ ವ್ಯಾಜ್ಯಗಳು ನಿರ್ಮಾಣ ಸ್ಥಗಿತಗೊಳ್ಳಲು ಮತ್ತು ಭೂ-ಸ್ಥಿತಿಗತಿಗೆ ಅಸ್ಥಿರತೆಗೆ ಕಾರಣವಾಗಿವೆ.

2. ಪ್ರಸ್ತುತ ಸಾರ್ವಜನಿಕ ಶಿಕ್ಷಣಕ್ಕಾಗಿ ಅಂಥ ಭೂಮಿಗಳನ್ನು ರಕ್ಷಿಸಿಕೊಳ್ಳಲು ಅಥವಾ ಮಾಡಲಾದ ಅನೌಪಚಾರಿಕ ಕೊಡುಗೆ-ದಾನಗಳನ್ನು ಸಿಂಧುಗೊಳಿಸಲು ಅದಕ್ಕೆಂದೇ ಯಾವುದೇ ಮೀಸಲಾಗಿರುವ ಶಾಸನವು ಅಸ್ತಿತ್ವದಲ್ಲಿರುವುದಿಲ್ಲ. ಅಸ್ತಿತ್ವದಲ್ಲಿರುವ ಕಾನೂನಾತ್ಮಕ ಚೌಕಟ್ಟುಗಳು ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ದೀರ್ಘಕಾಲದ, ಮುಕ್ತ ಮತ್ತು ಸ್ಥಿರ ಭೂಮಿಯ ಬಳಕೆಯನ್ನು ಸಮರ್ಪಕವಾಗಿ ಪರಿಹರಿಸುತ್ತಿಲ್ಲ. ಇದು ಸಾವಿರಾರು ಸೌಲಭ್ಯವಂಚಿತ ಶಿಕ್ಷಣ ಸಂಸ್ಥೆಗಳನ್ನು ಅಗೌರವಕ್ಕೆ ದೂಡಿದ್ದು, ರಾಜ್ಯದ ಮೂಲಸೌಕರ್ಯವನ್ನು ಮತ್ತು ಸಾರ್ವಜನಿಕ ಹೂಡಿಕೆಗಳನ್ನು ಕಾನೂನಿನ ಅಪಾಯಕ್ಕೆ ಒಡ್ಡಿದೆ.

3. ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ, 2026 ಈ ಮುಂದಿನ ಸವಾಲುಗಳನ್ನು,-

ಎ. ನಿರಂತರವಾಗಿ ಮತ್ತು ಹನ್ನೆರಡು ವರ್ಷಗಳಿಗಿಂತ ಕಡಿಮೆ ಇಲ್ಲದೆ ಆಕ್ಷೇಪಣೆಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಭೂಮಿಯು ನಿಹಿತವಾಗಿರುವುದೆಂದು ಭಾವಿಸುವುದನ್ನು ಉಪಬಂಧಿಸುವ ಮೂಲಕ;

ಬಿ. ವಿವಾದರಹಿತವಾಗಿ ಹನ್ನೆರಡು ವರ್ಷಗಳಿಗೆ ಮೀರಿದ ಅವಧಿಯಲ್ಲಿ ಬಳಸಿರುವಂಥ ಭೂಮಿಗಳ ವಿರುದ್ಧದ ಹಳತಾದ ಕ್ಲೇಮುಗಳು ಅಥವಾ ಕಾನೂನು ವ್ಯವಹರಣೆಗಳನ್ನು ಪ್ರತಿಷೇಧಿಸುವ ಮೂಲಕ;

ಸಿ. ದೀರ್ಘಕಾಲದಿಂದ ಶೈಕ್ಷಣಿಕ ಉದ್ದೇಶಗಳಿಗಾಗಿ ಔಪಚಾರಿಕ ದಸ್ತಾವೇಜುಗಳಿಲ್ಲದೆ ನೀಡಿದ ಭೂಮಿಯ ಬಳಕೆಯನ್ನು ಗುರುತಿಸುವ ಮೂಲಕ;

ಡಿ. ನಿಹಿತ ಪ್ರಮಾಣ ಪತ್ರಗಳನ್ನು ಹೊರಡಿಸಲು, ಅಧಿಕೃತ ಭೂಮಿಯ ರಿಜಿಸ್ಟರನ್ನು ನಿರ್ವಹಿಸುವುದರೊಂದಿಗೆ ಕುಂದುಕೊರತೆ ನಿವಾರಣೆ ಮತ್ತು ಅಪೀಲು ಕಾರ್ಯವ್ಯವಸ್ಥೆಯನ್ನು ಸ್ಥಾಪಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ಮೂಲಕ;

ಇ. ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ ಕಾನೂನುಬದ್ಧ ಸಕ್ರಮಾತಿ ಮತ್ತು ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಅರಣ್ಯ, ವಕ್ಫ್, ಬುಡಕಟ್ಟು ಮತ್ತು ಧಾರ್ಮಿಕ ಸಂಸ್ಥೆಯ ಭೂಮಿಗಳನ್ನು ನೋಡಿಕೊಳ್ಳುತ್ತಿರುವುದನ್ನು ಒಳಗೊಂಡಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ,

- ಎದುರಿಸುವುದು.

4. ಪ್ರಸ್ತಾವಿತ ಶಾಸನವು ಸಿಂಧುವಾದ ಹಕ್ಕುಗಳನ್ನು ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಶಮನಗೊಳಿಸದೆಯೇ, ಆದರೆ ನೈಜ ಕ್ಲೇಮುಗಳನ್ನು ಮಾಡಲು ಸೀಮಿತ ಗವಾಕ್ಷಿ ಮತ್ತು ಅಪೀಲಿಗಾಗಿ ವೇದಿಕೆಯನ್ನು ಒಳಗೊಂಡಂತೆ ಪ್ರಕ್ರಿಯಾತ್ಮಕ ರಕ್ಷಣೆಯನ್ನು ಉಪಬಂಧಿಸುವುದು. ಇದು ವೈಯಕ್ತಿಕ ಸ್ವತ್ತಿನ ಹಕ್ಕುಗಳೊಂದಿಗೆ ದೀರ್ಘಕಾಲಿಕ ಸಾರ್ವಜನಿಕ ಹಿತಾಸಕ್ತಿಯನ್ನು ಸರಿದೂಗಿಸುವ ಗುರಿಯನ್ನು ಹೊಂದಿದ್ದು, ಶಿಕ್ಷಣದ ಮೂಲಭೂತ ಹಕ್ಕನ್ನು ಎತ್ತಿಹಿಡಿಯುವುದು ಹಾಗೂ ಸರ್ಕಾರಿ ಶೈಕ್ಷಣಿಕ ಮೂಲಸೌಕರ್ಯದ ಕಾನೂನು ಖಚಿತತೆಯನ್ನು ಸಂರಕ್ಷಿಸುವುದು.

5. ವಿಧೇಯಕವು ಮೇಲಿನ ಉದ್ದೇಶಗಳನ್ನು ಈಡೇರಿಸುವುದಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 11:** | 11ನೇ ಖಂಡವು, ಈ ಅಧಿನಿಯಮ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಎಸ್. ಮಧು ಬಂಗಾರಪ್ಪ**
ಶಾಲಾ ಶಿಕ್ಷಣ ಮತ್ತು ಸಾಕ್ಷಾರತಾ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**NINTH SESSION**
**(Adjourned Meetings)**

# THE KARNATAKA GOVERNMENT EDUCATIONAL INSTITUTION'S LANDS (PROTECTION AND REGULARISATION) BILL, 2026

## (LA Bill No. 09 of 2026)

A Bill to provide protection and regularisation of the land vested and used by Government Educational Institutions in favour of the State Government.

Whereas it is expedient to provide protection and regularisation of the land vested and used by Government Educational Institutions in favour of the State Government and for the matters connected therewith or incidental there to;

Be it enacted by the Karnataka State Legislature in the seventy seventh year of the Republic of India, as follows:-

**1. Short title and commencement.-** (1) This Act may be called the Karnataka Government Educational Institution's Lands (Protection and Regularisation) Act, 2026.

(2) It shall come into force on such date as the State Government may, by notification in the Official Gazette, appoint.

**2. Definitions.-** In this Act, unless the context otherwise requires,

(a) "Authority" means the Department of School Education or Department of School Education (Pre-University) or anybody designated by the State Government for the purposes of this Act.

(b) "Government Educational Institution" includes approved schools as defined under section 2(3) of the Karnataka Education Act, 1983 and Government Pre-University College as defined under sub-rule (5) of rule 2 The Karnataka Department of School Education (Pre-University) (Academic, Registration, Administration and Grant-in-aid etc.) Rules, 2024; and

(c) "Prescribed" means prescribed by rules made under this Act.

**3. Vesting of Land Used by Government Educational Institutions.-** (1) Notwithstanding anything contained in any law for the time being in force, if a Government educational institution has functioned continuously on any immovable property for at least twelve years, the land shall be deemed to be vested in favour of the State Government or the appropriate Authority, free from all encumbrances, claims or reversionary interests.

(2) Such vesting shall not be affected by,-

(a) the absence of a registered document of transfer;

(b) the death of the donor, whether testate or intestate; and

(c) non-compliance with the provisions of the Transfer of Property Act, 1882 (Central Act 04 of 1882) or the Indian Succession Act, 1925. (Central Act 39 of 1925).

**4. Bar on Legal Claims and Proceedings**. (1) No suit, application, appeal or proceeding shall lie in any court or tribunal against the State or any Authority regarding any right, title or interest claimed by a person in vested land, where the occupation by the Government educational institution has continued for more than twelve years.

(2) Any suit pending on the date of commencement of this Act, relating to the title or possession of such Government educational institution lands, shall cease immediately unless compensation has already been awarded under an acquisition proceeding.

(3) Notwithstanding anything in sub-sections (1) and (2), any person who,-

(a) holds a registered title document for the land in question, and

(b) can prove by documentary evidence that the land was never voluntarily given for Government educational institution use, may file a claim before the Grievance Redressal Authority within thirty days from the date of commencement of this Act.

(4) If the claim is upheld, the Grievance Redressal Authority may recommend appropriate remedial action including land substitution or a. partial exemption from vesting, as prescribed by the State Government.

**5. Presumption of Public Purpose Use.-** (1) If the land has been used continuously for educational purposes with the knowledge of the community and without objection for more than twelve years, such use shall be presumed to be a valid and irrevocable public dedication.

(2) The absence of documentary proof shall not negate the presumption of public purpose use.

**6. Estoppel and laches**.- A person shall not be entitled to assert a claim over Government educational institution land if he or his predecessor-in-title knowingly acquiesced to the use of the land for Government educational institution purposes and failed to object within a reasonable time.

**7. Land register and vesting certificate.-** (1) The State Government, through the Estate Officer designated under Section 8, shall maintain a register of lands deemed to be vested under this Act.

(2) No vesting certificate shall be issued unless:

(a) a public notice has been published in atleast two newspapers in vide circulation in the local language at the panchayat and taluk offices;

(b) objections have been invited and addressed within a period of sixty days; and

(c) a summary hearing is held for objectors before the Grievance, Redressal Authority under section 9.

(3) The appropriate Authority shall issue a Vesting Certificate for each property, which shall serve as conclusive evidence of title for all purposes.

**8. Appointment and Powers of Estate Officer.-** (1) The Block Education Officer (BEO) and the Deputy Director of Pre-University Education (DDPU) shall be deemed to be the Estate Officer for the purposes of this Act in respect of all Government educational institution lands within his jurisdiction.

(2) The Estate Officer shall be responsible for,-

(a) maintaining accurate and up-to-date land records of all Government educational institution properties;

(b) monitoring encroachments, misuse or alienation of such lands;

(c) coordinating with the Rural Development and Panchayat Raj Department, Urban Development Department, Revenue Department and other related authorities, including but not limited to the Forest Department, the Wakf Board and departments responsible for lands governed by special laws such as the Scheduled Tribes and Other Traditional Forest Dwellers (Recognition of Forest Rights) Act, 2006 (Central Act 02 of 2007) or religious institution lands, for the purpose of demarcation, protection or recovery of Government educational institution land; and

(d) Assisting the Authority in the preparation and verification of Vesting Certificates.

(3) The Estate Officer may, by written communication, request the Tahsildar to,-

(a) conduct land surveys and demarcation;

(b) update revenue records to reflect statutory vesting; and

(c) initiate eviction or protection measures under the relevant land laws.

(4) The Estate Officer shall make all relevant records available for inspection by the School Education and, Literacy Department Revenue Department, Rural Development and Panchayat Raj Department, Urban Development Department and other related authorities, including but not limited to the Forest Department, the Wakf Board and departments responsible for lands governed by special laws such as the Scheduled Tribes and Other Traditional Forest Dwellers (Recognition of Forest Rights) Act, 2006 (Central Act 02 of 2007) or religious institution lands, as may be prescribed.

**9. Grievance Redressal Authority.-** (1) The Revenue Court constituted under the Karnataka Land Revenue Act, 1964 (Karnataka Act 12 of 1964) shall be the Grievance Redressal Authority for the purposes of this Act.

(2) Any person aggrieved by a Vesting Certificate or its denial, may file a representation before the Grievance Redressal Authority within a period of 30 days from the date of such order.

(3) The Grievance Redressal Authority shall dispose of the matter within a period of 60 days, with reasoned orders.

**10. Appeals to the Tribunal.-** (1) Any person aggrieved by the decision of the Grievance Redressal Authority may appeal to the Karnataka Appellate Tribunal, constituted under the Karnataka Appellate Tribunal Act, 1976 (Karnataka Act 10 of 1976).

(2) The appeal must be filed within a period of 30 days from the date of receipt of the order of the Grievance Redressal Authority.

**11. Powers to make rules.-** (1) The State Government, may, by notification, make rules to carry out the provisions of this Act.

(2) In particular and without prejudice to the generality of the foregoing provision, such rules may provide for,-

(a) procedure for identifying and surveying lands used by Government educational institution;

(b) maintenance of land registers;

(c) formats for Vesting Certificates and public notices, as prescribed by rules made under this Act; and

(d) all matters expressly required or allowed by this Act to be prescribed or in respect of which this Act makes no provision or makes insufficient

provision and a provision is, in the opinion of the State Government, necessary for the proper implementation of this Act.

(3) Any rule made under this Act may be made with retrospective effect and when such a rule is made, the reasons for making the rule shall be specified in a statement to be laid before both Houses of the State Legislature and subject to any modification made under sub-section (4), every rule made under this Act shall have effect as if it is enacted in the Act.

(4) Every rule made under this Act shall be laid as soon as may be before each House of the State Legislature while it is in Session for a total period of thirty days, which may be comprised in one Session or in two or more successive Sessions and if, before the expiry of the Session in which it is so laid or the Session immediately following both Houses agree in making any modification in the file or decide that any rule should not be made, the rule shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done under that rule.

**12. Protection of Action Taken in Good Faith.-** No suit, prosecution or other legal proceeding shall lie against the Government or any officer or authority for anything which is in good faith done or intended to be done! under this Act.

**13. Overriding Effect.-** The provisions of this Act shall have effect notwithstanding anything inconsistent therewith contained in any other law for the time being in force.

**14. Power to remove difficulties.-** (1) If any difficulty arises in giving effect to the provisions of this Act, the State Government may, by order published in the Official Gazette, make such provisions, not inconsistent with the provisions of this Act, as may be necessary or expedient for removing the difficulty:

Provided that, no order under this section shall be made after expiry of two years from the date of commencement of this Act.

(2) Every order made under this section shall, as soon as may be after its so made, be laid before both the Houses of the State Legislature.

## STATEMENT OF OBJECTS AND REASONS

1. In many parts of Karnataka, Government educational institutions have been established and functioning on lands donated by individuals, families or community bodies, often without formal documentation or registered transfer. These donations, made in good faith, enabled the State to develop vital educational infrastructure that has served generations of children. Despite decades of undisputed public use, recent claims by successors or legal heirs, based on technical gaps in documentation, have led to litigation which has stalled construction and uncertainty over land status.

2. Presently, there exists no dedicated legislation to protect such lands or validate informal gifts made for public education. Existing legal frameworks do not adequately address long-standing, open and settled use of land for Government educational institutions. This has left thousands of institutions vulnerable to disruption and placed State infrastructure and public investments at legal risk.
3. The Karnataka Government Educational Institution Lands (Protection and Regularisation) Bill, 2026 seeks to address this challenge by,-

   (a) providing for deemed vesting of lands where a Government educational institution has functioned continuously and without objection for not less than twelve years;
   (b) barring stale claims or legal proceedings against such lands beyond a twelve-year period of undisputed use;
   (c) recognising long-standing public use of lands given without formal documentation for educational purposes;
   (d) empowering the State to issue Vesting Certificates, maintain an official land register alongside establish a grievance redressal and appellate mechanism;
   (e) co-ordinating with relevant departments, including those administering forest, wakf, tribal and religious institution lands, to ensure lawful regularisation and protection of Government educational institution lands.

4. The proposed legislation does not extinguish valid rights unfairly but provides procedural safeguards, including a limited window for raising genuine claims and a forum for appeal. It aims to balance individual property rights with long-standing public interest, uphold the fundamental right to education and secure legal certainty for Government educational infrastructure.

5. The Bill seeks to achieve the above objects.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## MEMORANDUM REGARDING DELEGATED LEGISLATION

| | |
|---|---|
| Clause-11 | Clause 11 empowers the State Government to make rules to carrying out the purposes of this Act. |

The proposed delegation of legislative power is normal in character.

**S. MADHU BANGARAPPA**
Minister for School Education
and Literacy

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH